CC No. 454/2022

DW-1

ದಿನಾಂಕಃ 09-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ದೂರುದಾರರ ಪರ ಶ್ರೀ. ಬಿ ಎ ಬಿ ವಕೀಲರಿಂದ.</u>**

ನಾನು ಎಸ್ ಎಸ್ ಎಲ್ ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ. ನನಗೆ ಇಂಗ್ಲೀಷ ಅಂಕೆ ಸಂಖ್ಯೆಗಳನ್ನು ಗುರುತಿಸಲು ಓದಲು ಬರೆಯಲು ಬರುತ್ತದೆ. ನಮ್ಮ ವಕೀಲರಿಗೆ ದೂರುದಾರರನ್ನು ಪಾಟೀ ಸವಾಲು ಮಾಡಲು ಮತ್ತು ನನ್ನ ಸಾಕ್ಷ್ಯ ಮಾಡಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ದೂರುದಾರರು ಮತ್ತು ಆತನ ಕುಟುಂಬದವರು ತಮ್ಮ ಜೀವನ ನಿರ್ವಹಣೆಗಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಹಾಗೇ ಕೆಲಸ ಮಾಡುವಾಗ ದೂರುದಾರರು ಯಾರಿಗಾದರೂ ಮೋಸ ಮಾಡಿದ ಬಗ್ಗೆ ಅವರ ಬಗ್ಗೆ ಪ್ರಕರಣ ದಾಖಲು ಆಗಿರುತ್ತವೆ. ಹಾಗೇ ದೂರುದಾರರ ತಂದೆಯ ಹಾಗೂ ಸಂಬಂಧಿಕರ ವಿರುದ್ಧ ಪೊಲೀಸ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿತ್ತು. ಯಾರು ಹಾಗೇ ಪ್ರಕರಣ ದಾಖಲಿಸಿದ್ದರು ಅದರ ನಂಬರ ಏನು ಎಂದು ನನಗೆ ಗೊತ್ತಿಲ್ಲ. ಹಾಗೇ ದೂರುದಾರರ ವಿರುದ್ಧ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣಗಳು ವಿಚಾರಣೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರರಿಗೆ ಮತ್ತು ಅವರ ಕುಟುಂಬದವರಿಗೆ ನ್ಯಾಯಾಲಯದ ಆದೇಶದ ಪ್ರಕಾರ ಶಿಕ್ಷೆಯಾದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ.

2. ದೂರುದಾರರ ಪರಿಚಯ ನನಗೆ ಇರುತ್ತದೆ. ನಾನು ಬ್ಯಾಂಕಿನೊಂದಿಗೆ ಚೆಕ್ಕಿನಲ್ಲಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ಹಿಂದೆ ಸಿಂಡಿಕೇಟ್ ಬ್ಯಾಂಕ್ ದಲ್ಲಿ ನನ್ನ ಖಾತೆ ಇತ್ತು ಎಂದರೆ ಸರಿ. ಈಗ ಎಸ್ ಬಿ ಐ ಬ್ಯಾಂಕಿನಲ್ಲಿ ನನ್ನ ಖಾತೆ ಇರುತ್ತದೆ ಎಂದರೆ ಸರಿ. ಎಸ್‌ಬಿಐ ಬ್ಯಾಂಕಿನ ಚೆಕ್ಕನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ದೂರುದಾರರು ದವಸ ಧಾನ್ಯ ಮಾರಾಟ ಮಾಡುವ ಉದ್ಯೋಗ ಮಾಡುತ್ತಾರೆ ಎಂದರೆ ಸರಿ.

CC No. 454/2022
DW-1

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.